(ಇ) ಹೌದು. ಆದರೆ, ಅದು ಬಹಳ ಕಡಿಮೆ ಪ್ರಮಾಣದ್ದು. ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರಗಳು ಹೆಸರುಗಳನ್ನು ಅನುಕ್ರಮವಾಗಿ ಸೂಚಿಸುತ್ತಿಲ್ಲದಿರುವ ಕೆಲವು ದೂರುಗಳು ಬರುತ್ತಿವೆ, ಅವು ಅತಿ ವಿರಳ.

(ಈ) ಪರಿಸ್ಥಿತಿಯನ್ನು ಸರಿಪಡಿಸಲು ಅಭ್ಯರ್ಥಿಗಳನ್ನು ಗಣಕ ಯಂತ್ರದ ಮೂಲಕ ಆಯ್ಕೆ ಮಾಡಿ ಹೆಸರುಗಳನ್ನು ಅನುಕ್ರಮವಾಗಿ ಸೂಚಿಸಲು ಕ್ರಮ ಕೈಗೊಳ್ಳಲಾಗಿದೆ.

ಹುಬ್ಬಳ್ಳಿ ಪೇಟೆಯಲ್ಲಿ ಬೆಲ್ಲದ ಮೇಲಿನ ಮಾರ್ಕೆಟ್‌ಶುಲ್ಕ ಕುರಿತು

೫೦೬ (ಇ) ಶ್ರೀ ನೀಲಕಂಠ ಗೌಡಪ್ಪ ಪಾಟೀಲ್, (ಶಿಗ್ಗಾಂವ) ಮಾನ್ಯ ಸಹಕಾರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಹುಬ್ಬಳ್ಳಿ ಪೇಟೆಯಲ್ಲಿ ಬೆಲ್ಲದ ವಹಿವಾಟಿನ ಮೇಲೆ ಕೃಷಿ ಉತ್ಪನ್ನ ಮಾರಾಟ ಸಮಿತಿಯವರು ವಸೂಲಿ ಮಾಡಬೇಕಾದಂತಹ ಮಾರಾಟ ಶುಲ್ಕವನ್ನು ವಸೂಲು ಮಾಡದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಹುಬ್ಬಳ್ಳಿಯಲ್ಲಿ ಯಾವ ದಿನಾಂಕದಂದು ಬೆಲ್ಲವನ್ನು ಕ್ರಯವಿಪಡಿಸಿದ ಒಕ್ಕಲುತನ ಹುಟ್ಟುವಳಿಯೆಂದು ಪರಿಗಣಿಸಿದೆ.

ಇ) ಅಂದಿನಿಂದ ಇಲ್ಲಿಯವರೆಗೆ ಬೆಲ್ಲದ ಮೇಲೆ ಎಷ್ಟು ಮೊತ್ತದ ಮಾರಾಟ ಶುಲ್ಕ ಹುಬ್ಬಳ್ಳಿ ಎ.ಪಿ.ಎಂ.ಸಿ.ಗೆ ಬರಬೇಕಾಗಿತ್ತು?

ಶ್ರೀ ಆರ್. ಎಲ್. ಜಾಲಪ್ಪ (ಸಹಕಾರ ಮಂತ್ರಿಗಳು).—

ಅ) ಬಂದಿದೆ.

ಆ) ದಿನಾಂಕ. ೨೨-೭-೧೯೮೨ ರಿಂದ ಬೆಲ್ಲವು ಕ್ರಯಪಡಿಸಿದ ಹುಟ್ಟುವಳಿ ಎಂದು ಘೋಷಿಸಲಾಗಿದ್ದರೂ ಸಹ ಬೆಲ್ಲದ ವ್ಯಾಪಾರಸ್ಥರಿಗೆ ಮಾರುಕಟ್ಟೆ ಪ್ರಾಂಗಣದಲ್ಲಿ ಸ್ಥಳಾವಕಾಶ ಮಾಡಿ ಕೊಡಂವರೆಗೆ ಬೆಲ್ಲದ ಮಾರಾಟವನ್ನು ನಿಯಂತ್ರಣದ ಕಕ್ಷೆಗೆ ತರಲು ಸಾಧ್ಯವಾಗಿಲ್ಲ. ಈಗಿರುವ ಮಾರುಕಟ್ಟೆ ಪ್ರಾಂಗಣದಲ್ಲಿ ಸದರಿ ವ್ಯವಹಾರಸ್ಥರಿಗೆ ಸ್ಥಳಾವಕಾಶ ಮಾಡಿ ಕೊಡಲು ಸಾಧ್ಯವಾಗುವುದಿಲ್ಲವಾದ್ದರಿಂದ ಈಗ ಬೆಲ್ಲದ ವ್ಯವಹಾರ ನಡೆಸುವ ಸ್ಥಳವನ್ನು ಮಾರುಕಟ್ಟೆ ಉಪ ಪ್ರಾಂಗಣವೆಂದು ಘೋಷಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಇ) ಬೆಲ್ಲದ ಮಾರಾಟವನ್ನು ನಿಯಂತ್ರಣಗೊಳಿಸಿಲ್ಲವಾದ್ದರಿಂದ, ಈ ಮಾಹಿತಿಯು ದೊರಕುವುದಿಲ್ಲ.

ಹರಿಜನ ಗಿರಿಜನ ವಿದ್ಯಾರ್ಥಿನಿಲಯಗಳು.

೬೭೭(ಉ) ಶ್ರೀಮತಿ ಸುಮಾ ವಸಂತ (ವೀರಾಜಪೇಟೆ).—ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೊಡಗು ಜಿಲ್ಲೆಯಲ್ಲಿ ಹರಿಜನ ಗಿರಿಜನರಿಗಾಗಿ ಎಲ್ಲೆಲ್ಲಿ, ವಿದ್ಯಾರ್ಥಿನಿಲಯಗಳನ್ನು ನಡೆಸಲಾಗುತ್ತಿದೆ. ಪಟ್ಟಿ ನೀಡುವುದು.

ಆ) ಪ್ರತಿ ವಿದ್ಯಾರ್ಥಿನಿಲಯದಲ್ಲಿ ಈ ವರ್ಷಕ್ಕೆ ಎಷ್ಟೆಷ್ಟು ವಿದ್ಯಾರ್ಥಿಗಳು ಸೇರಿದ್ದಾರೆ.

ಇ) ಎಷ್ಟೇಷ್ಟು ವಿದ್ಯಾರ್ಥಿನಿಲಯಗಳಿಗೆ ಸರ್ಕಾರಿ ಕಟ್ಟಡವಿದೆ ಹಾಗೂ ಎಲ್ಲೆಲ್ಲಿ ಇದೆ.

ಈ) ಕಟ್ಟಡವಿಲ್ಲದ ವಿದ್ಯಾರ್ಥಿನಿಲಯಗಳಿಗೆ ಕಟ್ಟಡ ಒದಗಿಸಲು ಸರ್ಕಾರದವರು ಏನು ಕ್ರಮ ತೆಗೆದುಕೊಂಡಿದ್ದಾರೆ?

ಶ್ರೀ ಜಿ. ಬಸವಣ್ಣೆಪ್ಪ (ಸಮಾಜ ಕಲ್ಯಾಣ ಸಚಿವರು).—

ಅ) ಪಟ್ಟಿ ಲಗತ್ತಿಸಿದೆ.